ಅಸಲು ದಾವಾ ಸಂಖ್ಯೆ 219/2012

Dw-1

**ದಿನಾಂಕ 29-3-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀಮತಿ ಎಸ್ ಎಲ್ ಎ ವಕೀಲರಿಂದಃ**

ನಾನು 5 ತರಗತಿಯಿಂದ ಪದವಿ ವರೆಗೆ ಮಂಗಳೂರಿನಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆ. 1976 ರವರೆಗೆ ನಮ್ಮ ಕುಟುಂಬದವರು ಮಹರಾಷ್ಟ್ರದ ಬಾಂಬೆಯಲ್ಲಿ ನೆಲೆಸಿದ್ದರು, ಈ ಸಮಯದಲ್ಲಿ ಬೆಳ್ತಂಗಡಿಯ ಕಣಿಯೂರಿಗೆ ಬಂದು ಹೋಗುತ್ತಿದ್ದೆವು. ಕಣಿಯೂರಿನಲ್ಲಿ ನನ್ನ ತಂದೆಯ ಸ್ವಂತ ಮನೆ ಇರುತ್ತದೆ. ನಾನು ಹಾಗೂ 1 ರಿಂದ 3ನೇ ಪ್ರತಿವಾದಿಗಳು ಸದರಿ ಮನೆಯಲ್ಲಿ ವಾಸವಾಗಿರುತ್ತೇವೆ. ವಾದಿ ದಯಾ ಕುಮಾರಿ ರವರು ದಾವಾ ಅಸ್ತಿಯಲ್ಲಿ ವಿಭಾಗ ಕೋರಿ ದಾವೆ ಸಲ್ಲಿಸಿರುತ್ತಾರೆ. ಲಿಖಿತ ಹೇಳಿಕೆ ತಯಾರು ಮಾಡಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ವಕೀಲರಿಗೆ ಮಾಹಿತಿ ನೀಡುವಾಗ ನಾವು ಕಣಿಯೂರು ಗ್ರಾಮದಲ್ಲಿ ವಾಸವಾಗಿರುತ್ತೇವೆಂಬ ವಿಚಾರವನ್ನು ಹೇಳಿರುತ್ತೇನೆ. ನನ್ನ ತಂದೆಗೆ ಮಂಗಳೂರಿನಲ್ಲೂ ಒಂದು ಮನೆ ಇದ್ದು ಆ ಮನೆಯಲ್ಲಿ ಅವರು ಮೃತ ಪಟ್ಟಿರುತ್ತಾರೆ, ನಾವು ಮಂಗಳೂರಿನಲ್ಲಿ ವಾಸವಾಗಿದ್ದು ವಾರಾಂತ್ಯದಲ್ಲಿ ಕಣಿಯೂರಿಗೆ ಬಂದು ಹೋಗುತ್ತಿದ್ದೆವು. ಮಂಗಳೂರಿನಲ್ಲಿದ್ದ ಮನೆ ನನ್ನ ತಂದೆ ಹೆಸರಿನಲ್ಲಿರುತ್ತದೆ, ಸದರಿ ಜಾಗವು ನನ್ನ ತಂದೆಯ ತಾಯಿಯಾದ ಚೆಲುವಮ್ಮ ರವರು ವೆಂಕಟರಮಣ ದೇವಸ್ಥಾನದಿಂದ ಮೂಲ ಗೇಣಿಗೆ ಪಡೆದ ಜಾಗದಲ್ಲಿ ಮನೆ ಕಟ್ಟಿ ವಾಸವಾಗಿದ್ದರು. ದಯಾ ಕುಮಾರಿಯವರ ತಾಯಿ ಕುಶಾಲವತಿಗೆ ವಾದಿ ಮತ್ತು 4ನೇ ಪ್ರತಿವಾದಿಗಳು ಮಕ್ಕಳು. ನನ್ನ ತಾಯಿ ಶ್ರೀಯಾಲ ರವರಿಗೆ ನಾನು ಸೇರಿ 3 ಜನ ಗಂಡು ಮಕ್ಕಳು. ವಾದಿ ಮತ್ತು 4ನೇ ಪ್ರತಿವಾದಿಯನ್ನು ನೋಡಿರುತ್ತೇನೆ, ಆದರೆ ಅವರು ವಿದ್ಯಾಭ್ಯಾಸ ಮಾಡಿದ ಬಗ್ಗೆ ಗೊತ್ತಿರುವುದಿಲ್ಲ. ವಾದಿ ಮತ್ತು 4ನೇ ಪ್ರತಿವಾದಿ ಮಂಗಳೂರಿನ ಮನೆಗೆ ಬಂದು ಹೋಗುತ್ತಿದ್ದರು. ಮದುವೆಗೂ ಮೊದಲು ವಾದಿ ಮತ್ತು 4ನೇ ಪ್ರತಿವಾದಿ ಎಲ್ಲಿ ವಾಸವಾಗಿದ್ದರು ಎಂದು ಗೊತ್ತಿರುವುದಿಲ್ಲ. ವಾದಿ ಮತ್ತು 4ನೇ ಪ್ರತಿವಾದಿಗೆ ಮದುವೆಯಾಗಿದ್ದು ಕಾರ್ಕಳ ಮತ್ತು ಪುತ್ತೂರಿನಲ್ಲಿ ಇದ್ದರು. ವಾದಿ ಮತ್ತು 4ನೇ ಪ್ರತಿವಾದಿಯ ಮದುವೆ ಯಾವಾಗ ಆಗಿರುತ್ತದೆ ಮಎಂದು ನನಗೆ ಗೊತ್ತಿರುವುದಿಲ್ಲ. ವಾದಿ ಮತ್ತು 4ನೇ ಪ್ರತಿವಾದಿಯ ಮಕ್ಕಳ ಜೊತೆ ಮಾತುಕತೆ ಇರುತ್ತದೆ.

2. ನನ್ನ 1993 ರಲ್ಲಿ ತಂದೆ ತೀರುವ ವರೆಗೂ ವಾದಿ ಮತ್ತು 4ನೇ ಪ್ರತಿವಾದಿ ಮಂಗಳೂರಿನ ಮನೆಗೆ ಬಂದು ಹೋಗುತ್ತಿದ್ದರು. ತಂದೆ ತೀರಿದ ನಂತರ ವಾದಿ ಮತ್ತು 4ನೇ ಪ್ರತಿವಾದಿ ಮಂಗಳೂರಿನ ಮನೆಗೆ ಬರುವುದನ್ನು ನಿಲ್ಲಿಸಿರುತ್ತಾರೆ, ಆದರೆ ಇದಕ್ಕೆ ಕಾರಣವೇನೆಂದು ಗೊತ್ತಿರುವುದಿಲ್ಲ, ಆದರೆ ಸಮಾರಂಭಗಳಲ್ಲಿ ಸಿಕ್ಕಾಗ ಮಾತುಕತೆ ಇತ್ತು. ವಾದಿ ಮತ್ತು 4ನೇ ಪ್ರತಿವಾದಿ ಮಕ್ಕಳ ಮದುವೆಗೆ ಹೋಗಿರುತ್ತೇವೆ.

(ಈ ಹಂತದಲ್ಲಿ, ವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿರುವುದರಿಂದ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ.ಗಳು ಬೆಳ್ತಂಗಡಿ

(ಸಾ.ಓ.ಹೇ.ಕೇ.ಸ.ಇ.ಎ.ಒ)